File No. ENERGY/85/CORD/2019-R-I-ENERGY SECRETARIAT

# ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 85 ಸಿಒಆರ್ ಡಿ 2019

FTS No. 1204169

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ:24.05.2019

M. D.
29 MAY 2019
KPTCL

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಇಂಧನ ಇಲಾಖೆ,
ಬೆಂಗಳೂರು.

ಇವರಿಗೆ :

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಮಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ.
6. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಲಬುರಗಿ.
7. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.
8. ವ್ಯವಸ್ಥಾಪಕ ನಿರ್ದೇಶಕರು, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಬೆಂಗಳೂರು.
9. ಮುಖ್ಯ ವಿದ್ಯುತ್ ಪರವೀಕ್ಷಕರು, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ವಿದ್ಯುತ್ ನಿಯಂತ್ರಣಾ ಆಯೋಗ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು.

ನಿರ್ದೇಶಕರು (ಆಡಳಿತ & ಮಾ. ಸಂ)

ಮಾನ್ಯರೇ,

**ವಿಷಯ:** ಹೊಸ ಕುಮಾರ ಕೃಪಾ ವಸತಿ ಗೃಹ ಕೊಠಡಿಗಳನ್ನು ಆನ್ ಲೈನ್ ಮೂಲಕ ಕಾಯ್ದಿರಿಸುವುದು.

**ಉಲ್ಲೇಖ:** ಸರ್ಕಾರದ ಕಾರ್ಯದರ್ಶಿ ಸಿಆಸುಇ, ಇವರ ಪತ್ರ ಸಂಖ್ಯೆ: 165 ಹೆಚ್ ಇ ಟಿ 2018 ದಿನಾಂಕ:26.04.2019

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಅರೆ ಸರ್ಕಾರಿ ಪತ್ರದಲ್ಲಿ ಹೊಸದಾಗಿ 180 ಕೊಠಡಿಗಳುಳ್ಳ ಅತಿಥಿ ಗೃಹವನ್ನು ನಿರ್ಮಾಣ ಮಾಡಿ ಹೊಸ ಕುಮಾರ ಕೃಪಾ ವಸತಿ ಗೃಹವು ದಿನಾಂಕ: 1ನೇ ಫೆಬ್ರವರಿ 2019 ರಿಂದ ವಸತಿ ಗೃಹವನ್ನು ಪ್ರಾರಂಭ ಮಾಡಲಾಗಿದೆ ಎಂದು ತಿಳಿಸುತ್ತಾ, ಈ ಕಟ್ಟಡವನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಉದ್ದೇಶದಿಂದ ಸರ್ಕಾರಿ ಸುತ್ತೋಲೆ ಸಂಖ್ಯೆ:ಸಿಆಸುಇ 165 ಹೆಚ್ ಇಟಿ 2018(ಭಾ), ದಿನಾಂಕ:21.01.2019ರನ್ವಯ ಕರ್ನಾಟಕ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಅವುಗಳ ಸಾಮ್ಯಕ್ಕೊಳಪಟ್ಟಿರುವ ನಿಗಮ, ಮಂಡಳಿ, ಆಯೋಗ, ಪ್ರಾಧಿಕಾರ ಸವಿತಿ ಹಾಗೂ ಶಾಸನಬದ್ಧ ಸಂಸ್ಥೆಗಳ ಅಧ್ಯಕ್ಷರುಗಳು, ಸದಸ್ಯರುಗಳು, ಸಮೂಹ–ಎ ಗುಂಪಿನ ಅಧಿಕಾರಿಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಇತರೇ ಗಣ್ಯ ವ್ಯಕ್ತಿಗಳು ಅಧಿಕೃತ ಕಾರ್ಯನಿಮಿತ್ತ ಬೆಂಗಳೂರಿಗೆ ಆಗಮಿಸಿದ ಸಂದರ್ಭದಲ್ಲಿ ವಾಸ್ತವ್ಯಕ್ಕಾಗಿ ವಸತಿ ಗೃಹದ ಉಪಯೋಗಿಸಿಕೊಳ್ಳುವ ಸಂಬಂಧ ನಿರ್ವಹಣೆಯನ್ನು ಹೊಸ ಕುಮಾರ ಕೃಪಾ ವಸತಿ ನಿಯಮಗಳು, 2019ರಡಿ ಅವಕಾಶ

To Publish in website: BSS

ಕಲ್ಪಿಸಲಾಗಿದ್ದು, ವಸತಿ ಗೃಹದಲ್ಲಿ ಕೊಠಡಿಗಳನ್ನು ಆನ್ ಲೈನ್ ಮುಖಾಂತರ ನೇರವಾಗಿ ಕಾಯ್ದಿರಿಸಬಹುದಾಗಿದೆ ಎಂದು ತಿಳಿಸಿರುತ್ತಾರೆ. (ಸದರಿ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ).

ಮೇಲ್ಕಂಡ ಉಲ್ಲೇಖಿತ ಪತ್ರದಲ್ಲಿ ಪ್ರಸ್ತಾವಿಸಿರುವ ಅಶಗಳನ್ನು ಕಟ್ಟು ನಿಟ್ಟಾಗಿ ಅನುಸರಿಸುವಂತೆ ಸಂಬಂಧಪಟ್ಟವರ ಗಮನಕ್ಕೆ ತರಲಿ ತುರ್ತು ಅಗತ್ಯ ಕ್ರಮ ಕೈಗೊಳ್ಳುವಂತೆ ಈ ಮೂಲಕ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಅಂಜುಂ ಪರ್ವೇಜ್, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
**ANJUM PARWEZ,** I.A.S.,
Secretary to Government
Department of Personnel and
Administrative Reforms

Tel: Off: 22251425 / 22033335
Fax : 22256371
ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ, ಬೆಂಗಳೂರು – 560 001
Karnataka Government Secretariat
Vidhana Soudha, Bengaluru - 560 001

ಅ.ಸ.ಪ.ಸಂಖ್ಯೆ: ಸಿಆಸುಇ 165 ಹೆಚ್‌ಇಟಿ 2018

ದಿನಾಂಕ 26.04.2019

ಮಾನ್ಯರೇ,

ರಾಜ್ಯ ಅತಿಥಿಗಳು, ಗಣ್ಯ ವ್ಯಕ್ತಿಗಳು ಹಾಗೂ ಅಧಿಕಾರಿಗಳು ಬೆಂಗಳೂರಿಗೆ ಆಗಮಿಸಿದ ಸಂದರ್ಭದಲ್ಲಿ ವಾಸ್ತವ್ಯಕ್ಕಾಗಿ ಅನುಕೂಲವಾಗಲು ಹೊಸದಾಗಿ 180 ಕೊಠಡಿಗಳುಳ್ಳ ಅತಿಥಿ ಗೃಹವನ್ನು ನಿರ್ಮಾಣ ಮಾಡಿ ಹೊಸ ಕುಮಾರ ಕೃಪಾ ವಸತಿ ಗೃಹ ಎಂದು ಹೆಸರಿಡಲಾಗಿದೆ.

ಸದರಿ ಕಟ್ಟಡದ ದಿನನಿತ್ಯದ ನಿರ್ವಹಣೆಯನ್ನು ವೃತ್ತಿನಿರತವಾಗಿ ಹಾಗೂ ಒಳ್ಳೆಯ ಗುಣಮಟ್ಟ ರೀತಿಯಿಂದ ನಿರ್ವಹಿಸಲು ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ನೀಡಲಾಗಿದೆ ಮತ್ತು 1ನೇ ಫೆಬ್ರವರಿ 2019 ರಿಂದ ವಸತಿ ಗೃಹವನ್ನು ಪ್ರಾರಂಭ ಮಾಡಲಾಗಿದೆ.

ಈ ಕಟ್ಟಡವನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಉದ್ದೇಶದಿಂದ ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ 165 ಹೆಚ್‌ಇಟಿ 2018 (ಭಾ), ದಿನಾಂಕ:21.01.2019ರನ್ವಯ ಕರ್ನಾಟಕ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಅವುಗಳ ಸಾಮ್ಯಕ್ಕೊಳಪಟ್ಟಿರುವ ನಿಗಮ, ಮಂಡಳಿ, ಆಯೋಗ, ಪ್ರಾಧಿಕಾರ ಸಮಿತಿ ಹಾಗೂ ಶಾಸನಬದ್ಧ ಸಂಸ್ಥೆಗಳ ಅಧ್ಯಕ್ಷರುಗಳು, ಸದಸ್ಯರುಗಳು, ಸಮೂಹ-ಎ ಗುಂಪಿನ ಅಧಿಕಾರಿಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಇತರೇ ಗಣ್ಯ ವ್ಯಕ್ತಿಗಳು ಅಧಿಕೃತ ಕಾರ್ಯನಿಮಿತ್ತ ಬೆಂಗಳೂರಿಗೆ ಆಗಮಿಸಿದ ಸಂದರ್ಭದಲ್ಲಿ ವಾಸ್ತವ್ಯಕ್ಕೆ ಅನುವುಮಾಡಿಕೊಡಲಾಗಿದೆ, ಸದರಿ ಸುತ್ತೋಲೆಯನ್ನು ಲಗತ್ತಿಸಿದೆ.

ವಸತಿ ಗೃಹದ ನಿರ್ವಹಣೆಯನ್ನು ಹೊಸ ಕುಮಾರ ಕೃಪ ವಸತಿ ನಿಯಮಗಳು, 2019ರಡಿ ನಿರ್ವಹಣೆ ಮಾಡಲಾಗುತ್ತದೆ ಮತ್ತು ವಸತಿ ಗೃಹದಲ್ಲಿ ಕೊಠಡಿಗಳನ್ನು ಆನ್ ಲೈನ್ ಮುಖಾಂತರ ನೇರವಾಗಿ ಕಾಯ್ದಿರಿಸಬಹುದಾಗಿದೆ. ಈ ಪತ್ರದೊಂದಿಗೆ ಟಿಪ್ಪಣಿಯಲ್ಲಿ ವಿವರವನ್ನು ನೀಡಲಾಗಿದೆ.

....2

ಆದ್ದರಿಂದ, ಸುತ್ತೋಲೆಯನ್ನು ಹಾಗೂ ಟಿಪ್ಪಣಿಯನ್ನು ತಮ್ಮ ಇಲಾಖೆ ಹಾಗೂ ಇಲಾಖೆ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುವ ವಿವಿಧ ನಿಗಮ ಮಂಡಳಿಗಳು, ಆಯೋಗಗಳು, ಪ್ರಾಧಿಕಾರಗಳು ಸಮಿತಿಗಳು ಹಾಗೂ ಶಾಸನಬದ್ಧ ಸಂಸ್ಥೆಗಳ ಅಧ್ಯಕ್ಷರುಗಳು / ಸದಸ್ಯರುಗಳು ಹಾಗೂ ಸಮೂಹ-ಎ ಗುಂಪಿನ ಅಧಿಕಾರಿಗಳ ಗಮನಕ್ಕೆ ತರಲು ಕೋರಿದೆ.

**ಗೌರವಗಳೊಂದಿಗೆ,**

**ತಮ್ಮ ವಿಶ್ವಾಸಿ,**

**ಗೆ,**
ಶ್ರೀ. ರವಿಕುಮಾರ್. ಪಿ, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಇಂಧನ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 165 ಹೆಚ್‌ಇಟಿ 2018 (ಭಾ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 21-01-2019.

## ಸುತ್ತೋಲೆ

ವಿಷಯ: ಸರ್ಕಾರದ ಇಲಾಖೆಗಳ ಸಮೂಹ-ಎ ಗುಂಪಿನ ಅಧಿಕಾರಿಗಳು ಹಾಗೂ ಅವುಗಳ ಅಧೀನದಲ್ಲಿ ಬರುವ ನಿಗಮ, ಮಂಡಳಿ, ಪ್ರಾಧಿಕಾರ, ಆಯೋಗ, ಸಮಿತಿ ಹಾಗೂ ಶಾಸನಬದ್ಧ ಸಂಸ್ಥೆಗಳ ಅಧ್ಯಕ್ಷರು, ಸದಸ್ಯರು, ಸಮೂಹ-ಎ ಗುಂಪಿನ ಅಧಿಕಾರಿಗಳು ಮತ್ತು ಇತರೆ ಗಣ್ಯ ವ್ಯಕ್ತಿಗಳಿಗೆ ಕುಮಾರ ಕೃಪ ಅತಿಥಿ ಗೃಹದ ಹೊಸ ಕಟ್ಟಡದಲ್ಲಿ ವಾಸ್ತವ್ಯ ಕಲ್ಪಿಸುವ ಕುರಿತು.

*****

ರಾಜ್ಯ ಅತಿಥಿಗಳು, ಗಣ್ಯ ವ್ಯಕ್ತಿಗಳು ಹಾಗೂ ಅಧಿಕಾರಿಗಳು ಬೆಂಗಳೂರಿಗೆ ಆಗಮಿಸಿದ ಸಂದರ್ಭದಲ್ಲಿ ಕುಮಾರ ಕೃಪಾ ವಸತಿ ಗೃಹದ ಮುಖ್ಯ, ಅನೆಕ್ಸ್ ಕಟ್ಟಡ ಹಾಗೂ ಬಾಲಬ್ರೂಯಿ ವಸತಿ ಗೃಹದಲ್ಲಿ ವಾಸ್ತವ್ಯ ಕಲ್ಪಿಸಲಾಗುತ್ತಿದೆ. ಆದರೆ, ಕೊಠಡಿ ಸಂಖ್ಯೆಗಳು ಕಡಿಮೆಯಿರುವುದರಿಂದ, ಹೊಸದಾಗಿ 180 ಕೊಠಡಿಗಳುಳ್ಳ ಅತಿಥಿಗೃಹವನ್ನು ನಿರ್ಮಾಣ ಮಾಡಲಾಗಿದೆ.

2. ಸದರಿ ಕಟ್ಟಡದ ದಿನನಿತ್ಯದ ನಿರ್ವಹಣೆಯನ್ನು ವೃತ್ತಿನಿರತ ಮತ್ತು ಒಳ್ಳೆಯ ಗುಣಮಟ್ಟ ರೀತಿಯಿಂದ ನಿರ್ವಹಿಸಲು ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ನೀಡಲಾಗುತ್ತದೆ.

3. ರಾಜ್ಯ ಅತಿಥಿಗಳ ಹಾಗೂ ಗಣ್ಯವ್ಯಕ್ತಿಗಳ ಭದ್ರತಾ ದೃಷ್ಟಿಯಿಂದ, ಸದರಿ ಕಟ್ಟಡದಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆಗಳು ಇರುವುದಿಲ್ಲ ಹಾಗೂ ಯಾವುದೇ ಸ್ಥಾನಮಾನ ಹೊಂದಿರದೇ ಇರುವ ಖಾಸಗಿ ವ್ಯಕ್ತಿಗಳಿಗೆ ಕೊಠಡಿಗಳನ್ನು ಸಹ ನೀಡಲಾಗುವುದಿಲ್ಲ. ಆದ್ದರಿಂದ ಈ ಕೊಠಡಿಗಳನ್ನು ರಾಜ್ಯಕ್ಕೆ ಆಗಮಿಸುವ ರಾಜ್ಯ ಅತಿಥಿಗಳಿಗೆ, ಗಣ್ಯ ವ್ಯಕ್ತಿಗಳಿಗೆ ಮತ್ತು ಸಮೂಹ-ಎ ವೃಂದದ ಅಧಿಕಾರಿಗಳಿಗೆ ಮಾತ್ರ ನೀಡುವ ಬಗ್ಗೆ ನಿರ್ಧಾರವಾಗಿರುತ್ತದೆ.

4. ಕರ್ನಾಟಕ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಅವುಗಳ ಸಾಮ್ಯಕ್ಕೊಳಪಟ್ಟಿರುವ ನಿಗಮ, ಮಂಡಳಿ, ಆಯೋಗ, ಪ್ರಾಧಿಕಾರ, ಸಮಿತಿ ಹಾಗೂ ಶಾಸನಬದ್ಧ ಸಂಸ್ಥೆಗಳ ಅಧ್ಯಕ್ಷರುಗಳು, ಸದಸ್ಯರುಗಳು, ಸಮೂಹ-ಎ ಗುಂಪಿನ ಅಧಿಕಾರಿಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಇತರೇ ಗಣ್ಯ ವ್ಯಕ್ತಿಗಳು ಅಧಿಕೃತ ಕಾರ್ಯನಿಮಿತ್ತ ಬೆಂಗಳೂರಿಗೆ ಆಗಮಿಸಿದ ಸಂದರ್ಭದಲ್ಲಿ ಅವರಿಗೂ ಸಹ ವಾಸ್ತವ್ಯಕ್ಕೆ ಹೊಸ ಕಟ್ಟಡದಲ್ಲಿ ಅನುವುಮಾಡಿಕೊಟ್ಟಲ್ಲಿ, ಈ ಕಟ್ಟಡವನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದೆಂದು ಅಭಿಪ್ರಾಯ ಪಡಲಾಗಿದೆ.

5. ಈ ಹಿನ್ನಲೆಯಲ್ಲಿ ಇನ್ನೂ ಮುಂದೆ ಕರ್ನಾಟಕ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸಮೂಹ-ಎ ವರ್ಗದ ಅಧಿಕಾರಿಗಳು ಹಾಗೂ ಅವುಗಳ ಸಾಮ್ಯಕ್ಕೊಳಪಟ್ಟಿರುವ ನಿಗಮ, ಮಂಡಳಿಗಳು, ಆಯೋಗಗಳು, ಪ್ರಾಧಿಕಾರಗಳು, ಸಮಿತಿಗಳು ಹಾಗೂ ಶಾಸನಬದ್ಧ ಸಂಸ್ಥೆಗಳ ಅಧ್ಯಕ್ಷರುಗಳು, ಸದಸ್ಯರುಗಳು, ಸಮೂಹ-ಎ ವರ್ಗದ ಅಧಿಕಾರಿಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಇತರೇ ಗಣ್ಯ ವ್ಯಕ್ತಿಗಳು ಅಧಿಕೃತ ಕಾರ್ಯನಿಮಿತ್ತ ಬೆಂಗಳೂರಿಗೆ ಆಗಮಿಸಿದ ಸಂದರ್ಭದಲ್ಲಿ ಸ್ವಂತ ತಂಗುವಿಕೆ ವ್ಯವಸ್ಥೆ ಇಲ್ಲದಿದ್ದ ಪಕ್ಷದಲ್ಲಿ ಕಡ್ಡಾಯವಾಗಿ ಕುಮಾರ ಕೃಪಾ ವಸತಿ ಗೃಹದ ಹೊಸ ಕಟ್ಟಡದಲ್ಲಿ ಪಾವತಿ ಆಧಾರದ ಮೇಲೆ ವಾಸ್ತವ್ಯ ಪಡೆಯಲು ಸೂಚಿಸಿದೆ.

6. ಇಲಾಖೆಗಳು ಹಾಗೂ ಅವುಗಳ ಸಾಮ್ಯಕ್ಕೊಳಪಟ್ಟಿರುವ ನಿಗಮ, ಮಂಡಳಿಗಳು, ಆಯೋಗಗಳು, ಪ್ರಾಧಿಕಾರಗಳು, ಸಮಿತಿಗಳು ಹಾಗೂ ಕಾನೂನಾತ್ಮಕವಾಗಿ ರಚಿಸಿದ ಸಂಸ್ಥೆಗಳು ಯಾವುದೇ ಸಭೆ, ಕಾರ್ಯಗಾರ ಸಾರ್ವಜನಿಕ ಕಾರ್ಯಕ್ರಮ ಇತ್ಯಾದಿ ಆಯೋಜಿಸಿದ ಸಂದರ್ಭದಲ್ಲಿ ಆಗಮಿಸುವ ಅತಿಥಿಗಳು ಹಾಗೂ ಇತರರಿಗೆ ಒಂದು ವೇಳೆ ಸ್ವಂತ ತಂಗುವಿಕೆ ವ್ಯವಸ್ಥೆ ಇಲ್ಲದಿದ್ದ ಪಕ್ಷದಲ್ಲಿ ಅಧಿಕೃತವಾಗಿ ವಾಸ್ತವ್ಯ ಕಲ್ಪಿಸಬೇಕಾದಲ್ಲಿ ಕಡ್ಡಾಯವಾಗಿ ಕುಮಾರ ಕೃಪಾ ವಸತಿ ಗೃಹದ ಹೊಸ ಕಟ್ಟಡದಲ್ಲಿ ಪಾವತಿ ಆಧಾರದ ಮೇಲೆ ವಾಸ್ತವ್ಯ ಒದಗಿಸಲು ಕ್ರಮ ಕೈಗೊಳ್ಳಲು ಸೂಚಿಸಿದೆ

7. ಹೊಸ ಕಟ್ಟಡದಲ್ಲಿ ಒಂದು ವೇಳೆ ಕೊಠಡಿಗಳು ಖಾಲಿಯಿಲ್ಲದಿದ್ದರೆ ವಿಶೇಷಾಧಿಕಾರಿ, ಕುಮಾರ ಕೃಪಾ ವಸತಿ ಗೃಹ ಇವರಿಂದ ಕೊಠಡಿಗಳು ಖಾಲಿ ಇಲ್ಲದಿರುವ ಬಗ್ಗೆ ಪ್ರಮಾಣ ಪತ್ರ ಪಡೆದ ನಂತರವೇ ಖಾಸಗಿ ಹೋಟೆಲ್‌ಗಳಲ್ಲಿ ವಾಸ್ತವ್ಯ ಪಡೆಯಲು/ಕಲ್ಪಿಸಲು ಕ್ರಮ ಕೈಗೊಳ್ಳುವುದು. ಈ ವಿಷಯವನ್ನು ಎಲ್ಲಾ ಇಲಾಖೆಯ ಮುಖ್ಯಸ್ಥರು ತಮ್ಮ ಇಲಾಖೆ ಹಾಗೂ ಆ ಇಲಾಖೆಯ ಅಧೀನದಲ್ಲಿರುವ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಗಮನಕ್ಕೆ ತರುವುದು ಮತ್ತು ಕಡ್ಡಾಯವಾಗಿ ಪಾಲಿಸುವಂತೆ ನೋಡಿಕೊಳ್ಳುವುದು.

8. ಮೇಲ್ಕಂಡ ನಿರ್ದೇಶನವನ್ನು ಪಾಲಿಸದಿದ್ದರೆ ಆ ವಾಸ್ತವ್ಯಕ್ಕೆ ತಗಲುವ ವೆಚ್ಚವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿ ಮಾಡುವುದು.

(ಅಂಜುಂ ಪರ್ವೇಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ

ಇವರಿಗೆ:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು /ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
2. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
3. ಎಲ್ಲಾ ಜಿಲ್ಲಾಧಿಕಾರಿಗಳು.
4. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
5. ಸರ್ಕಾರದ ವ್ಯಾಪ್ತಿಯ ಎಲ್ಲಾ ನಿಗಮ, ಮಂಡಳಿಗಳು ಆಯೋಗ, ಪ್ರಾಧಿಕಾರ ಶಾಸನಬದ್ಧ ಸಂಸ್ಥೆಗಳಿಗೆ ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರ ಮೂಲಕ.

# NOTE ON NEW KUMAR KRUPA GUEST HOUSE TARIFF AND ON-LINE BOOKING

| Sl. No. | Details | Rate in Rs | |
|---|---|---|---|
| | | Suites | Deluxe rooms |
| 1 | Chairman, Deputy Chairman, Members, of Boards/ Corporations/ Authorities/ Commissions/ Committees/ and other statutory bodies of GoK | 750 | 500 |
| 2 | Chairman, Members of Boards/ Corporations/ Authorities/ Commissions/ Committees/ and other statutory bodies of GoI and other States. | 1500 | 1000 |
| 3 | Officers of Government of Karnataka including judicial Services Autonomous / Statutory bodies (Group A Officers ) | 600 | 400 |
| 4 | Officers of other States & Central Government including judicial Services Autonomous / Statutory bodies (Group A Officers ) | 1000 | 600 |
| 5 | Retired Group A Officers GoK | 1000 | 600 |
| 6 | Retired Group A Officers GoK / GoI and other States | 1200 | 800 |
| 7 | Others | 3000 | 1500 |
| Note | Additional bed will be charged Rs.300/- day for all the above categories | | |

**Note:** ***(i) Rooms in the KKGH (New Building) will be provided for the private visit of the Government officers subject to availability on those days (Tariff will be charged double the above mentioned rates). Preference will be given to persons, who are coming on official duty and if available, rooms will be provided for the private visit for a maximum of 3 days. If no. of the days exceeds 3 days, then for those extra days charges will be calculated on par with others.***

**(ii)*Officers accompanied by their family members shall pay the rates prescribed for Double Occupancy and additional members under the respective categories. "Family Members" for this purpose shall be husband or wife and wholly dependent children and parents of the Guest.***

***(iii) If the stay of any Guest (other than the State Guest) exceeds 5 days the tariff shall be double the charges applicable for the respective categories. If this stay exceeds 15 days, three times the normal charges shall be levied. Provided in case of Government servants on duty, they shall be charged at normal rates, if their stay beyond 5 days has been approved by the designated authority.***

## MEETING HALL SERVICES.

1. There are two air-conditioned meeting halls and can be booked session wise ie Morning session --- 1000 AM to 0100 PM and
   Afternoon session ----0230 PM to 0530 PM

| Sr No | Meeting Hall | Capacity | Rate per session in Rs |
|---|---|---|---|
| 1 | Hall-1 | 28 | 3000 |
| 2 | Hall-2 | 34 | 5000 |

2. Water, tea ,coffee, high tea and working lunches will be done by KSTDC on payment basis.

3. It shall not be used for press conferences

## STEPS TO BOOK ROOMS MEETING HALL

1. Open https://kstdc.co in your browser

2. Click on New Kumarkrupa icon ( For mobile user click on the right side icon for selecting New Kumarkrupa icon)

3. Fill in requested details

4. Click send

5. You will get e-mail of the enquiry and further

6. Confirmation e-mail Once the DPAR (State Protocol) allots